ಸಿ.ಸಿ. ನಂ. 1015/21 ಡಿ.ಡಬ್ಲ್ಯೂ-1

ದಿನಾಂಕಃ 27.09.2025 ರಂದು ಡಿ.ಡಬ್ಲ್ಯೂ-1ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಹೆಚ್ ಜಿ ವಕೀಲರಿಂದಃ**

**1.** ನಾನು ಪಿಯು ಸಿ ವರೆಗೂ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಕೆ ಎಸ್ ಆರ್ ಟಿಸಿ ಯಲ್ಲಿ ಕಂಡಕ್ಟರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಿಪಿ 1 ಚೆಕ್ ನನ್ನ ಖಾತೆಗೆ ಸಂಬಂಧಪಟ್ಟಿದ್ದು ಎಂದರೆ ಸರಿ. ನಿಪಿ 1ಎ ಸಹಿ ನನ್ನದು ಎಂದರೆ ಸರಿ. ಪಿರ್ಯಾದಿ ಎಷ್ಟು ವರ್ಷಗಳಿಂದ ಪರಿಚಯ ಇರುತ್ತಾರೆ ಎಂದರೆ 7-8.

2. ಪಿರ್ಯಾದಿ ಚೀಟಿ ವ್ಯವಹಾರ ಮಾಡುತ್ತಿದ್ದಾರೆ ಎಂದು ತೋರಿಸಲು ದಾಖಲಾತಿ ಇದೆಯೇ ಎಂದರೆ ಇಲ್ಲ. ನಾನು ಚೀಟಿ ವ್ಯವಹಾರ ಮಾಡಿರುತ್ತೇನೆ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿರುತ್ತೇನೆಯೇ ಎಂದರೆ ಇಲ್ಲ. ಪಿರ್ಯಾದಿಗೆ ಯಾವಾಗ ಚೆಕ್ ನೀಡಿರುತ್ತೇನೆ ಎಂದರೆ 2020 ರಲ್ಲಿ ಇರಬಹುದು. ದಿನಾಂಕ ನೆನಪಿಲ್ಲ. ಪಿರ್ಯಾದಿ ವಿರುದ್ಧ ಚೆಕ್ ವಾಪಸ್ಸು ನೀಡುತ್ತಿಲ್ಲ ಎಂದು ಕಾನೂನು ಕ್ರಮ ತೆಗೆದುಕೊಂಡಿದ್ದೀರ ಎಂದರೆ ಇಲ್ಲ. ಪಿರ್ಯಾದಿ ಯಾವುದೇ ಹೊಸ ಮನೆ ನಿರ್ಮಿಸಿರುವುದಿಲ್ಲ ಮತ್ತು ಅವರಿಗೆ ಮೂರು ಲಕ್ಷ ನೀಡುವ ಆರ್ಥಿಕ ಚೈತನ್ಯ ಇತ್ತು ಎಂದರೆ ಸರಿಯಲ್ಲ. ಸದರಿ ಮನೆಗೆ ಸಂಬಂಧಪಟ್ಟ ದಾಖಲಾತಿ ಹಾಜರುಪಡಿಸಿದ್ದೀರ ಎಂದರೆ ಇಲ್ಲ. ಪಿರ್ಯಾದಿಯಿಂದ ನಾನು ಮೂರು ಲಕ್ಷ ಹಣ ಸಾಲವಾಗಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

3. ನನ್ನ ವಿರುದ್ಧ ಎಷ್ಟು ಚೆಕ್ ಪ್ರಕರಣ ಇರುತ್ತದೆ ಎಂದರೆ

ಇದೊಂದೇ ಇರುತ್ತದೆ. ಪಿರ್ಯಾದಿಗೆ ನಾನು ಮೂರು ಲಕ್ಷ ನೀಡುವ ಬಾಧ್ಯತೆ ಇರುತ್ತದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಶ್ರೀಮತಿ ಸ್ನೇಹಾ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಆಲೂರು.